**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 18-01-2025**

**ಪಾಟೀ ಸವಾಲುಃ 2 ರಿಂದ 5ನೇ ಪ್ರತಿವಾದಿ ಪರ ಶ್ರೀ. ಜಿ ಎಮ್ ಡಿ ವಕೀಲರಿಂದಃ**

1. ರಾಮಚಂದ್ರ ನನ್ನ ಗಂಡ. ರಾಮಚಂದ್ರನ ತಂದೆ ಹೆಸರು ಗಂಗಾಧರ ಪಾಟೀಲ. ನನ್ನ ಮದುವೆಯು ಯಾವ ತಾರೀಖು ತಿಂಗಳು ಇಸ್ವಿ ಎಂದು ಆಯಿತು ಹೇಳಲು ನನಗೆ ಸಾಧ್ಯವಿಲ್ಲ ಏಕೆಂದರೆ ನಾನು ಶಾಲೆಯನ್ನು ಕಲಿತಿಲ್ಲ. ರಾಮಚಂದ್ರನ ಜೊತೆ ಮದುವೆಗೆ ಸಂಬಂಧಿಸಿದ ಠರಾವು ಯಾದಿ ಬಗ್ಗೆ ನಮ್ಮ ಹತ್ತಿರ ದಾಖಲೆಗಳು ಇಲ್ಲ ಏಕೆಂದರೆ ಆ ಸಮಯದಲ್ಲಿ ಅವು ಇರಲಿಲ್ಲ. ರಾಮಚಂದ್ರ ಇವರೊಂದಿಗೆ ಮದುವೆಯಾಗಿ 50 ವರ್ಷಗಳು ಆಗಿವೆ. ಮದುವೆಯಾದ ಬಗ್ಗೆ ಲಗ್ನ ಪತ್ರಿಕೆಯನ್ನು ಹಾಜರು ಮಾಡಿಲ್ಲ. ನನ್ನ ಹತ್ತಿರ ಈಗ ರೇಶನ್ ಕಾರ್ಡ, ಆಧಾರ ಕಾರ್ಡ ಮತ್ತು ಚುನಾವಣೆ ಗುರುತಿನ ಚೀಟಿ ಇವೆ. ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ರೇಶನ್ ಕಾರ್ಡ, ಆಧಾರ ಕಾರ್ಡ ಮತ್ತು ಚುನಾವಣೆ ಗುರುತಿನ ಚೀಟಿ ಗಳಲ್ಲಿ ನನ್ನ ಪೂರ್ಣ ಹೆಸರು ತಂಗೆವ್ವಾ ರಾಮಚಂದ್ರ ಪಾಟೀಲ ಎಂದು ಇರುತ್ತದೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಹೆಸರು ರಾಮಚಂದ್ರ ಎಂದು ಬಾಯಿ ಮಾತಿನಿಂದ ಹೇಳುತ್ತಿದ್ದು ಅದನ್ನು ಹೊರತುಪಡಿಸಿ ಬೇರೆ ಪುರಾವೆ ಇರುವುದಿಲ್ಲ.

2. ವಾದಿ ನಂ.2 ರವರು 1ನೇ ತರಗತಿಯವರೆಗೆ ಶಾಲೆಗೆ ಹೋಗಿದ್ದರು. ವಾದಿ ನಂ.2 ರವರ ತಂದೆ ಹೆಸರು ರಾಮಚಂದ್ರ. ಶಾಲೆಯಲ್ಲಿ ವಾದಿ ನಂ.2 ರವರ ದಾಖಲಾತಿ ಇರುವುದಿಲ್ಲ. ವಾದಿ ನಂ.2 ರವರ ತಂದೆ ಹೆಸರು ರಾಮಚಂದ್ರ ಎಂದು ಬಾಯಿ ಮಾತಿನಿಂದ ಹೇಳುತ್ತಿದ್ದು ಅದನ್ನು ಹೊರತುಪಡಿಸಿ ಬೇರೆ ಪುರಾವೆ ಇರುವುದಿಲ್ಲ.

3. ಪ್ರತಿವಾದಿ ನಂ.1 ರವರ ಮದುವೆಯು ರಾಮಚಂದ್ರನ ಜೊತೆ ನನ್ನ ಮದುವೆಯಾದ 2-3 ವರ್ಷಗಳ ಆದ ನಂತರ ಆಗಿರುತ್ತದೆ. ಸಾಕ್ಷಿ ಮುಂದುವರೆದು ರಾಮಚಂದ್ರ ಇವರು ನನಗೆ ಹೊಡೆ ಬಡೆ ಮಾಡುತ್ತಿದ್ದನು. ಆ ಬಗ್ಗೆ ನಾನು ದೂರನ್ನು ಪೊಲೀಸ ಸ್ಟೆಶನಲ್ಲಿ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ರಾಮಚಂದ್ರ ಇವನು ನನ್ನ ಅತ್ತಿ ಮಗ. ನಮ್ಮ ತಂದೆ ಮತ್ತು ಹಿರಿಯರು ಅವನನ್ನು ಕರೆದು ವಿಚಾರಣೆ ಮಾಡಿರುತ್ತಾರೆ. ಆ ಸಮಯದಲ್ಲಿ ಮೂರು ಜನ ಹಿರಿಯರು ಇದ್ದರು. ನನ್ನ ತಂದೆ ಮತ್ತು ಇನ್ನು ಇಬ್ಬರು ಇದ್ದರು ಆ ಇಬ್ಬರ ಹೆಸರು ನನಗೆ ಗೊತ್ತಿಲ್ಲ. ಒಂದೇ ಸಲ ವಿಚಾರಣೆ ಮಾಡಿರುತ್ತಾರೆ ಆ ನಂತರ ರಾಮಚಂದ್ರನು ಬರಲಿಲ್ಲ ಎನ್ನುತ್ತಾರೆ. ಸದರಿ ವಿಚಾರಣೆಯು ಪ್ರತಿವಾದಿ ನಂ.1 ಕಾಶವ್ವಾ ಇವಳ ಜೊತೆ ರಾಮಚಂದ್ರನು ಮದುವೆ ಆಗುವ ಮುಂಚೆ ಆಗಿರುತ್ತದೆ. ನನ್ನ ತಂದೆ ಮತ್ತು ಇಬ್ಬರು ಜನರು ರಾಮಚಂದ್ರನನ್ನು ಕರೆದು ವಿಚಾರಣೆ ಮಾಡಿಲ್ಲ ಮತ್ತು ರಾಮಚಂದ್ರನು ನನಗೆ ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರನು ಅತ್ತೆ ಮಗ ಇದ್ದ ಆ ಕಾರಣಕ್ಕಾಗಿ ಅವನ ಮೇಲೆ ನಾನು ದೂರನ್ನು ಕೊಟ್ಟಿಲ್ಲ ಎಂದು ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ. ರಾಮಚಂದ್ರನು ಅತ್ತೆ ಮಗ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

4. ಪ್ರತಿವಾದಿ ನಂ.1 ಕಾಶವ್ವಾ ಇವಳ ಜೊತೆ ರಾಮಚಂದ್ರನು ಮದುವೆ ಆಗಿದ್ದು ಅವರಿಗೆ ಪ್ರತಿವಾದಿ ನಂ.2-ಸುಶವ್ವಾ , ಪ್ರತಿವಾದಿ ನಂ.3-ಭಾರತಿ ಮತ್ತು ಮೃತ ಮಂಜವ್ವಾ ಮಕ್ಕಳು. ಪ್ರತಿವಾದಿ ನಂ.2 ರವರ ಮದುವೆಯು ಮಹಾಂತೇಶ ತಿಗಡಿ ಇವರೊಂದಿಗೆ ಮದುವೆಯಾಗಿರುತ್ತದೆ. ಪ್ರತಿವಾದಿ ನಂ.3 ರವರ ಮದುವೆಯು ರಮೇಶ ಗಡಾದರ ಇವರೊಂದಿಗೆ ಮದುವೆಯಾಗಿರುತ್ತದೆ. ಮೃತ ಮಂಜುಳಾ ಇವಳ ಮದುವೆಯು ಹಣುಮಂತ ಪದ್ಮನಾಬ ಇವರೊಂದಿಗೆ ಮದುವೆಯಾಗಿತ್ತು. ಅವಳಿಗೆ ಪ್ರತಿವಾದಿ ನಂ.4 ಪ್ರಮೊದ, ಪ್ರತಿವಾದಿ ನಂ.5 ಪ್ರತಮೇಶ ಮಕ್ಕಳು

ಆಗಿರುತ್ತವೆ. ಪ್ರತಿವಾದಿ ನಂ.6 ಬಸವ್ವಾ ಇವಳ ಮದುವೆಯು ರಾಮಚಂದ್ರನೊಂದಿಗೆ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ಸಲ್ಲಿಸಲು ನನ್ನ ತಮ್ಮ ಮಾಹಿತಿಯನ್ನು ನೀಡಿರುತ್ತಾನೆ. ನನ್ನ ತಮ್ಮ ವಕೀಲರಿಗೆ ಮಾಹಿತಿ ಕೊಡುವ ಸಮಯದಲ್ಲಿ ನಾನು ಕೂಡಾ ಇದ್ದೆ. ಪ್ರತಿವಾದಿ ನಂ.6 ಬಸವ್ವಾ ಇವಳಿಗೆ ಪ್ರತಿವಾದಿ ನಂ.7 ಭೀಮವ್ವಾ ಮಗಳು ಇದ್ದ ಬಗ್ಗೆ ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿಲ್ಲ. ಪ್ರತಿವಾದಿ ನಂ.6 ರವರು ನನ್ನ ಗಂಡ ರಾಮಚಂದ್ರ ಇವರ ಜೊತೆ ಮದುವೆಯಾಗಿದ್ದ ಎನ್ನುವ ವಿಷಯವನ್ನು ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿಲ್ಲ. ಪ್ರತಿವಾದಿ ನಂ.6 ಬಸವ್ವಾ ಇವಳಿಗೆ ದೀಪಾ ಎನ್ನುವ ಮಗಳು ಇದ್ದಾಳೆ ಎಂದರೆ ಸರಿಯಲ್ಲ. ಬಸವ್ವಾ ಇವಳಿಗೆ ದೀಪಾ ಎನ್ನುವ ಮಗಳು ಇದ್ದರು ಕೂಡಾ ಇಲ್ಲವೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಏನು ತಕರಾರನ್ನು ತಮ್ಮ ಪ್ರತಿವಾದ ಪತ್ರದಲ್ಲಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಪ್ರತಿವಾದಿ ನಂ.6 ಬಸವ್ವಾ ಇವಳಿಗೆ ದೀಪಾ ಎನ್ನುವ ಮಗಳು ಇರುತ್ತಾಳೆ ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಾಮಚಂದ್ರ ಪಾಟೀಲ ಮತ್ತು ಪ್ರತಿವಾದಿ ನಂ.1 ಕಾಶವ್ವಾ ಇವರ ಮನೆತನಕ್ಕೆ ಮತ್ತು ನನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರ ಇವರ ಮನೆತನಕ್ಕೆ ಸಂಬಂದಿಸಿದಂತೆ 4 ಎಕರೆ ಜಮೀನು, ಎತ್ತುಗಳು, ಗಾಡಿ ಮತ್ತು ಮನೆ ಇತ್ತು. ಇವುಗಳೆಲ್ಲವನ್ನು ಮಾರಾಟ ಮಾಡಿ ಬೇರೆ ಜಮೀನು ಮತ್ತು ಆಸ್ತಿಗಳನ್ನು ಖರೀದಿ ಮಾಡಿಕೊಂಡಿದ್ದಾನೆ. ಜಮೀನು ಮತ್ತು ಆಸ್ತಿಗಳು ಚಿಕ್ಕಅಂಗ್ರೊಳಿಯಲ್ಲಿ ಇದ್ದವು. ಅವುಗಳನ್ನು ನಾನು ನನ್ನ ತವರು ಮನೆಗೆ ಬಂದ ನಂತರ ಮಾರಾಟ ಮಾಡಿದ್ದಾನೆ. ನಾನು ನನ್ನ ತವರು ಮನೆಗೆ ಯಾವಾಗ ಬಂದಿದ್ದೆನೆ ಎಂದರೆ ಸಾಕ್ಷಿಯು ನನ್ನ ಮಗಳಿಗೆ ಈಗ 35 ವರ್ಷ ಆಗಿದ್ದು, ನನ್ನ ಮಗಳಿಗೆ 11 ತಿಂಗಳು ಆದಾಗ ನಾನು ಗಂಡನ ಮನೆಯಿಂದ ತವರು ಮನೆಗೆ ಬಂದಿರುತ್ತೇನೆ. ಸಾಕ್ಷಿಯು ಮುಂದುವರೆದು ನನಗೆ ಗಂಡನು

ಹೊಡೆ ಬಡೆ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ತವರು ಮನೆಗೆ ಬಂದ 4–5 ವರ್ಷಗಳು ಆದ ನಂತರ ನನ್ನ ಗಂಡನು ಆಸ್ತಿಗಳನ್ನು ಮಾರಾಟ ಮಾಡಿರುತ್ತಾನೆ. ಜಮೀನು ಆಸ್ತಿಗಳನ್ನು ಗಂದಿಗವಾಡ ಊರಿನವರು ಖರೀದಿ ಮಾಡಿಕೊಂಡಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಆ ಜಮೀನು ಆಸ್ತಿಗಳನ್ನು ಮಾರಾಟ ಮಾಡಿದ ವಿಷಯ ಒಂದು ವರ್ಷದಲ್ಲಿ ನನಗೆ ಗೊತ್ತಾಗಿರುತ್ತದೆ. ಜಮೀನುಗಳನ್ನು ಮಾರಾಟ ಮಾಡಿದ ಬಗ್ಗೆ ನಾನು ಇವತ್ತಿನವರೆಗೂ ತಕರಾರನ್ನು ಮಾಡಿಲ್ಲ. ಜಮೀನುಗಳು ಇದ್ದ ಬಗ್ಗೆ ನಾನು ಕಾಗದ ಪತ್ರಗಳನ್ನು ಹಾಜರು ಮಾಡಿಲ್ಲ. ಜಮೀನುಗಳನ್ನು ಮಾರಾಟ ಮಾಡಿದ ಬಗ್ಗೆ ನಾನು ಕಾಗದ ಪತ್ರಗಳನ್ನು ಹಾಜರು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಅವು ನಮ್ಮ ಮೃದುನ ಬಳಿ ಇವೆ. ಮೃದುನ ಹೆಸರು ಮಲ್ಲಪ್ಪಾ ಪಾಟೀಲ. ಆ ಕಾಗದ ಪತ್ರಗಳನ್ನು ನಾನು ನೋಡಿದ್ದೆನೆ. ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅಲ್ಲಿ ಹೋಗಿ ನೋಡಬೇಕು ಎನ್ನುತ್ತಾರೆ. ದಾವಾ ಆಸ್ತಿಗಳನ್ನು ರಾಮಚಂದ್ರ ಪಾಟೀಲ ಇವರು ಗಳಿಸಿದ ಆಸ್ತಿಗಳು ಎಂದರೆ ಸಾಕ್ಷಿಯು ಮೊದಲಿನ ಆಸ್ತಿಗಳನ್ನು ಮಾರಾಟ ಮಾಡಿ ದಾವಾ ಆಸ್ತಿಗಳನ್ನು ಗಳಿಸಿದ್ದಾನೆ ಎನ್ನುತ್ತಾರೆ. ಸದರಿ ದಾವಾ ಆಸ್ತಿಗಳನ್ನು ಖರೀದಿ ಮಾಡುವ ಸಮಯದಲ್ಲಿ ರಾಮಚಂದ್ರ ಪಾಟೀಲ ಇವನು ಮಾತ್ರ ಹಣವನ್ನು ಕೊಟ್ಟಿದ್ದು ಬೇರೆ ಯಾರು ಕೊಟ್ಟಿಲ್ಲ ಎಂದರೆ ಸರಿ. ನನ್ನ ಗಂಡ ಚಿಕ್ಕಅಂಗ್ರೂಳ್ಳಿ ಗ್ರಾಮದಲ್ಲಿ ಇದ್ದ ಮನೆತನದ ಜಮೀನುಗಳನ್ನು, ಎತ್ತುಗಳನ್ನು, ಗಾಡಿ ಮತ್ತು ಮನೆ ಯನ್ನು ಮಾರಾಟ ಮಾಡಿ ದಾವಾ ಅಸ್ತಿಗಳನ್ನು ಖರೀದಿ ಮಾಡಿದ್ದಾನೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಚಿಕ್ಕಅಂಗ್ರೊಳ್ಳಿಯಲ್ಲಿ ನನ್ನ ಗಂಡ ರಾವುಚಂದ್ರ ಪಾಟೀಲ ಇವನ ಹೆಸರಿನಲ್ಲಿ ಜಮೀನುಗಳು ಮನೆ ಇದ್ದ ಬಗ್ಗೆ ದಾಖಲಾತಿಗಳನ್ನು ನಾನು ಹಾಜರಪಡಿಸಿಲ್ಲ. ಸಾಕ್ಷಿ ಮುಂದುವರೆದು ನಂತರ ಹಾಜರಪಡಿಸುತ್ತೇನೆ ಎನ್ನುತ್ತಾರೆ.

5. ದಾವಾ ಶೆಡ್ಯೂಲ-ಎ ಜಮೀನು ನಾನು ಸ್ವತಃ ನೋಡಿಲ್ಲ. ಜಮೀನಿನ ಚಕಬಂದಿಯನ್ನು ಬರೆಸಿಲ್ಲ. ದಾವಾ ಜಮೀನಿನ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಶೆಡ್ಯೂಲ-ಎ ಜಮೀನನ್ನು ಗುರುತು ಹಿಡಿಯಲು ನನಗೆ ಸಾಧ್ಯವಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ನೋಡಿದ್ದೆನೆ ಎನ್ನುತ್ತಾರೆ. ದಾವಾ ಜಮೀನು ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ ರವರ ಬಳಿ ಪ್ರಕರಣ ಆಗಿತ್ತು ಅಲ್ಲಿ ಏನು ತೀರ್ಮಾನ ಆಗಿದೆ ಎಂದು ನನಗೆ ಗೊತ್ತಿಲ್ಲ. ರಾಮಚಂದ್ರ ಇವರು ಜೀವಂತ ಇದ್ದಾಗ ಪ್ರತಿವಾದಿ ನಂ.1 ಕಾಶವ್ವಾ ಮತ್ತು ಪ್ರತಿವಾದಿ ನಂ.6 ಬಸವ್ವಾ ಇವರಿಗೆ ಮೃತ್ಯು ಪತ್ರವನ್ನು ಬರೆದು ಇಟ್ಟಿದ್ದರು ಎಂದರೆ ಸರಿಯಲ್ಲ. ದಿಃ21.10.2017 ರಂದು ಖಾನಾಪೂರ ಉಪನೊಂದಣಿ ಕಚೇರಿದಲ್ಲಿ ಮೃತ್ಯು ಪತ್ರವನ್ನು ನೊಂದ ಮಾಡಿಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ ಮತ್ತು ಅದು ನನಗೆ ಸಂಬಂಧ ಇಲ್ಲ. ಸದರಿ ಮೃತ್ಯು ಪತ್ರದ ಪ್ರಕಾರ ದಾವಾ -ಎ ಶೆಡ್ಯೂಲ ಆಸ್ತಿಯನ್ನು ಪ್ರತಿವಾದಿ ನಂ.1 ಮತ್ತು ಪ್ರತಿವಾದಿ ನ.6 ರವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೃತ್ಯು ಪತ್ರದ ವಿಷಯ ಗೊತ್ತಿದ್ದರು ಕೂಡಾ ಗೊತ್ತಿಲ್ಲವೆಂದು ದಾವಾ ಆಸ್ತಿಗಳನ್ನು ಎತ್ತಿ ಹಾಕುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ರಾಮಚಂದ್ರ ಪಾಟೀಲ ಇವರು ಸ್ವಂತ ಗಳಿಸಿದ ಆಸ್ತಿಗಳಾಗಿದ್ದು ಅವುಗಳ ಮೇಲೆ ನನಗೆ ಯಾವುದೇ ಅಧಿಕಾರ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಾದಿ ನಂ.2 ಇವಳಿಗೂ ಕೂಡಾ ಯಾವುದೇ ಅಧಿಕಾರ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಕಾಶವ್ವ ಇವಳೆ ರಾಮಚಂದ್ರ ಪಾಟೀಲ ಇವರ ಮೊದಲನೆಯ ಕಾನೂನುಬದ್ಧ ಹೆಂಡತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಮೊದಲನೆ ಕಾನೂನುಬದ್ಧ ಹೆಂಡತಿ ಎನ್ನುತ್ತಾರೆ. ನನಗಾಲಿ, ವಾದಿ ನಂ.2 ರವರಾಗಲಿ ಮತ್ತು ರಾಮಚಂದ್ರ ಪಾಟೀಲ

ಇವನಿಗಾಗಲಿ ದಾವಾ ಆಸ್ತಿಗಳು  ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ರಾವಚುಂದ್ರ ಪಾಟೀಲನ ಮೊದಲನೆ ಹೆಂಡತಿ ಮತ್ತು ವಾದಿ ನಂ.2 ಶೋಬಾ ಇವಳು ನಮ್ಮ ಮಗಳು ಎಂದು ಸುಳ್ಳಾಗಿ ದಾವೆಯನ್ನು ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ರಾಮಚಂದ್ರ ಪಾಟೀಲ ಇವನ ಮೊದಲನೆ ವರ್ಗದ ವಾರಸುದಾರು ಎಂದು ಸುಳ್ಳು ಕ್ಲೇಮು ಮಾಡುತ್ತಿದ್ದೆವೆ ಎಂದರೆ ಸರಿಯಲ್ಲ.    ದಾವಾ ಆಸ್ತಿಗಳು ಪ್ರತಿವಾದಿಯರಿಗೆ ಸಂಬಂಧಿಸಿದ್ದು ಅವುಗಳನ್ನು ಕಬಳಿಸುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ  ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ.1 ಮತ್ತು 6 ಮತ್ತು 7 ರ ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದುಡಲಾಯಿತು.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**